ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಭಾಲ್ಕಿಯಲ್ಲಿ 100 ಹಾಸಿಗೆಗಳ ಆಸ್ಪತ್ರೆಯನ್ನು ದಿನಾಂಕ: 21-01-2007 ರಂದು ಪ್ರಾರಂಭಿಸಲಾಯಿತು.

ಆ) ಈ ಆಸ್ಪತ್ರೆಯಲ್ಲಿ 93 ಹಾಸಿಗೆಗಳು ಹಾಗೂ 93 ಮಂಚಗಳು ಲಭ್ಯವಿವೆ. ಆದರೆ, ಹಾಸಿಗೆಗಳ ಉಪಯೋಗ ಪ್ರಮಾಣ ಸುಮಾರು 50 ಆಗಿದೆ.

ಇ) ಈ ಆಸ್ಪತ್ರೆಯಲ್ಲಿ 100 ಹಾಸಿಗೆಗಳು/ಮಂಚಗಳ ಪೈಕಿ 93 ಹಾಸಿಗೆಗಳು/ಮಂಚಗಳು ಲಭ್ಯವಿದ್ದು, ಉಪಯೋಗ ಪ್ರಮಾಣ ಸುಮಾರು 50 ಇದ್ದ ಕಾರಣ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶಿಕ್ಷಕರಿಗೆ ಸಂಬಳ ಬಾಕಿ ಇರುವುದು

856 (1418) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು ಈ ವಸತಿ ಶಾಲೆಗಳಿಗೆ ಶಿಕ್ಷಕರನ್ನು ಔಟ್ ಸೋರ್ಸಿಂಗ್ ಮೂಲಕ ನೇಮಕಾತಿ ಮಾಡಿಕೊಂಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಶಿಕ್ಷಕರುಗಳಿಗೆ ನಿಯಮಿತವಾಗಿ ಸಂಬಳ ದೊರೆಯದೇ ಇವರುಗಳು ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಎಷ್ಟು ತಿಂಗಳಿನಿಂದ ಈ ಶಿಕ್ಷಕರುಗಳಿಗೆ ಸಂಬಳ ನೀಡಬೇಕಾಗಿದೆ.

ಈ) ಹಲವಾರು ತಿಂಗಳುಗಳಿಂದ ಬಾಕಿ ಇರುವ ಶಿಕ್ಷಕರ ವೇತನವನ್ನು ಪಾವತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು.?

ಊ) ಈ ಶಾಲೆಗಳ ನಿರ್ವಹಣೆ ಮತ್ತು ಶಿಕ್ಷಕರ ಸಂಬಳಕ್ಕಾಗಿ ಕಳೆದ ಒಂದು ವರ್ಷದಿಂದ ಯಾವ ಬಾಬ್ತಿಗಾಗಿ ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಭಾಲ್ಕಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಪರಿಶಿಷ್ಟ ಜಾತಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬಾಲ್ಕಿ ನಗರದಲ್ಲಿ ಇರುತ್ತದೆ.

ಹೌದು, ಔಟ್ ಸೋರ್ಸಿಂಗ್ (ಹೊರಸಂಪನ್ಮೂಲ ಏಜೆನ್ಸಿ) ಮೂಲಕ ನೇಮಕ ಮಾಡಿಕೊಂಡಿರುವುದು ನಿಜವಿರುತ್ತದೆ.

ಆ) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ವರದಿ ಮಾಡುತ್ತಾ, ಕಿಯೋನಿಕ್ಸ್ ಸಂಸ್ಥೆಯು ಪ್ರತಿ ತಿಂಗಳು ನಿಗಧಿತ ದಿನಾಂಕದೊಳಗೆ ಬಿಲ್ಲುಗಳನ್ನು ಇಲಾಖೆಗೆ ಸಲ್ಲಿಸದೇ ಇರುವುದರಿಂದ ಶಿಕ್ಷಕರಿಗೆ ಸಂಭಾವನೆಗಳು ಪಾವತಿಸುವಲ್ಲಿ ವಿಳಂಬವಾಗಿದ್ದು, ನಿಜವಿರುತ್ತದೆ. ಸದರಿ ಸಂಸ್ಥೆಯವರಿಗೆ ಈ ಬಿಲ್ಲುಗಳನ್ನು ಸಲ್ಲಿಸಲು ಇಲಾಖೆಯಿಂದ ಎರಡು ಬಾರಿ ತಿಳಿಸಿದ್ದಾಗಿಯೂ ಸಂಸ್ಥೆಯವರು ಫೆಬ್ರವರಿ–2010 ರಲ್ಲಿ ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ನಂತರ ಇವರ ಬಿಲ್ಲುಗಳನ್ನು ಪಾವತಿಸಲಾಗಿದ್ದು, ಸಂಸ್ಥೆಯವರು ದಿನಾಂಕ: 15–03–2010 ರಂದು ಆಯಾ ಶಿಕ್ಷಕರಿಗೆ ಸಂಭಾವನೆಗಳನ್ನು ಪಾವತಿಸುವುದಾಗಿ ತಿಳಿಸಿದ್ದಾರೆ.

ಇ) ಮತ್ತು ಈ) 9 ತಿಂಗಳ ವೇತನ ಪಾವತಿಸಬೇಕಾಗಿದ್ದು, ಫೆಬ್ರವರಿ – 2010ರವರೆಗೆ ಸಂಭಾವನೆ ಪಾವತಿಸಲು ಕ್ರಮಕೈಗೊಳ್ಳಲಾಗಿದೆ.

ಉ)

ಕಳೆದ ಒಂದು ವರ್ಷದಿಂದ ನಿರ್ವಹಣೆಗಾಗಿ ಜೂನ್ 09 ರಿಂದ ಫೆಬ್ರುವರಿ 2010 ರವರೆಗೆ	ಕಳೆದ ಒಂದು ವರ್ಷದಿಂದ ಶಿಕ್ಷಕರ ಸಂಬಳಕ್ಕಾಗಿ 6:09 ರಿಂದ 2:2010ರ ವರೆಗೆ
ರೂ. 7,21,332/–	ರೂ. 6,35,424/–